**All India Radio: Bangalore**
**National Bulletin In Kannada**
**25.04.2025 1.10pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**25.04.2025 1.10pm**

**<><><><>**

ಮುಖ್ಯಾಂಶಗಳು

೧. ಭಯೋತ್ಪಾದನೆಯ ವಿರುದ್ಧ ದೇಶ ಒಗ್ಗಟ್ಟಿನಿಂದ ನಿಂತಿದೆ; ಮನ್ ಕಿ ಬಾತ್ ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ

೨. ಜಪಾನ್ ಹಿಂದಿಕ್ಕಿ ಜಾಗತಿಕ ೪ನೇ ಅತಿ ದೊಡ್ಡ ಆರ್ಥಿಕತೆ ರಾಷ್ಟ್ರವಾಗಿ ಹೊರಹೊಮ್ಮಿದ ಭಾರತ

೩. ೨೦೨೪-೨೫ನೇ ಹಣಕಾಸು ವರ್ಷಕ್ಕೆ ನೌಕರರ ಭವಿಷ್ಯ ನಿಧಿ- ಠೇವಣಿಗಳ ಮೇಲಿನ ಬಡ್ಡಿದರ ಶೇಕಡಾ ೮.೨೫ಕ್ಕೆ ಅನುಮೋದಿಸಿದ ಕೇಂದ್ರ ಸರ್ಕಾರ

೪. ನವದೆಹಲಿಯಲ್ಲಿಂದು ಪ್ರಧಾನಿ ಅಧ್ಯಕ್ಷತೆಯಲ್ಲಿ ಎನ್‌ಡಿಎ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ಚಿಂತನಶೀಲ ಅಧಿವೇಶನ

೫. ಐಪಿಎಲ್ ಟಿ-೨೦ ಕ್ರಿಕೆಟ್: ಇಂದು ಗುಜರಾತ್ ಟೈಟನ್ಸ್ - ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ - ಕೋಲ್ಕತ್ತ ನೈಟ್ ರೈಡರ್ಸ್ ಮುಖಾಮುಖಿ

**<><><><>**

ಭಾರತ ದೇಶ ಇಂದು ಭಯೋತ್ಪಾದನೆಯ ವಿರುದ್ಧ ಒಗ್ಗೂಡಿ ನಿಂತಿದೆ. ಹಾಗೂ ಭಯೋತ್ಪಾದನೆಯನ್ನು ಕೊನೆಗೊಳಿಸಲೇಬೇಕು ಎಂಬುದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೂಡಿಬಂದ ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ದೇಶ-ವಿದೇಶದಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ

ಮಾತನ್ನು ಹಂಚಿಕೊಂಡಿದ್ದಾರೆ. ಮನ್ ಕಿ ಬಾತ್ ೧೨೨ನೇ ಆವೃತ್ತಿಯಲ್ಲಿಂದು ಪ್ರಧಾನಿ ಅವರು, 'ಆಪರೇಷನ್ ಸಿಂಧೂರ್' ಸಮಯದಲ್ಲಿ ನಮ್ಮ ಸೇನಾ ಪಡೆಗಳು ಪ್ರದರ್ಶಿಸಿದ ಶೌರ್ಯ ಪ್ರತಿಯೊಬ್ಬ ಭಾರತೀಯಯನ್ನೂ ಹೆಮ್ಮೆಪಡುವಂತೆ ಮಾಡಿದೆ. ಗಡಿಯಾಚೆಗಿನ ಭಯೋತ್ಪಾದಕ ಅಡಗುತಾಣಗಳನ್ನು ನಮ್ಮ ಪಡೆಗಳು ನಿಖರತೆಯಿಂದ ಕರಾರುವಾಕ್ಕಾಗಿ ನಾಶಪಡಿಸಿರುವುದು ಹೆಮ್ಮೆಯ ವಿಷಯವಾಗಿದೆ. 'ಆಪರೇಷನ್ ಸಿಂಧೂರ್' ಪ್ರಪಂಚದಾದ್ಯಂತ ಭಯೋತ್ಪಾದನೆಯ ವಿರುದ್ಧದ ಹೋರಾಟಕ್ಕೆ ಹೊಸ ಭರವಸೆ ನೀಡಿದೆ ಮತ್ತು ಉತ್ಸಾಹ ತುಂಬಿದೆ ಎಂದು ಹೇಳಿದರು. 'ಆಪರೇಷನ್ ಸಿಂಧೂರ್' ಕೇವಲ ಮಿಲಿಟರಿ ಕಾರ್ಯಾಚರಣೆಯಲ್ಲ, ಇದು ನಮ್ಮ ದೃಢನಿಶ್ಚಯ, ಧೈರ್ಯ ಮತ್ತು ಬದಲಾಗುತ್ತಿರುವ ಭಾರತದ ಚಿತ್ರಣವಾಗಿದೆ.  ತ್ರಿವರ್ಣ ಧ್ವಜದಲ್ಲಿ ರಂಗು ಮೇಳೈಸಿದೆ. ಸಾವಿರಾರು ಜನರು ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದುಕೊಂಡು ದೇಶದ ಸೇನೆಗೆ ಗೌರವ ಸಲ್ಲಿಸಲು ಮುಂದೆ ಬಂದರು. ಅನೇಕ ನಗರಗಳಲ್ಲಿ, ಹೆಚ್ಚಿನ ಸಂಖ್ಯೆಯ ಯುವಕರು ನಾಗರಿಕ ರಕ್ಷಣಾ ಸ್ವಯಂಸೇವಕರಾಗಲು ಒಗ್ಗೂಡಿದರು. ದೇಶಭಕ್ತಿ ಗೀತೆಗಳನ್ನು ಹಾಡಲಾಗುತ್ತಿದೆ ಎಂದು ಪ್ರಧಾನಿ ತಿಳಿಸಿದರು. ಬಿಹಾರದ ಕಟಿಹಾರ್, ಉತ್ತರ ಪ್ರದೇಶದ ಕುಶಿನಗರ ಮತ್ತು ಇನ್ನೂ ಹಲವಾರು ನಗರಗಳಲ್ಲಿ, ಆ ಸಮಯದಲ್ಲಿ ಜನಿಸಿದ ಮಕ್ಕಳಿಗೆ 'ಸಿಂದೂರ' ಎಂದು ನಾಮಕರಣ ಮಾಡಿರುವುದಾಗಿ ತಿಳಿಸಿದರು. ಯೋಧರು ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದರು, ಅದು ಅವರ ಅದಮ್ಯ ಸಾಹಸವಾಗಿತ್ತು ಮತ್ತು ಅದರಲ್ಲಿ ಭಾರತದಲ್ಲಿ ತಯಾರಿಸಿದ ಶಸ್ತ್ರಾಸ್ತ್ರಗಳು, ಉಪಕರಣಗಳು ಮತ್ತು ತಂತ್ರಜ್ಞಾನದ ಶಕ್ತಿಯೂ ಸೇರಿತ್ತು. ಈ ಅಭಿಯಾನದ ನಂತರ, ದೇಶಾದ್ಯಂತ 'ಗಿಂಛಿಚಿಟ ಜಿಂಡಿ ಐಂಛಿಚಿಟ' ಕುರಿತು ಹೊಸ ಆಶಾಕಿರಣ ಮೂಡಿದೆ. 'ಜನರ ಒಗ್ಗೂಡುವಿಕೆ, ಸಾರ್ವಜನಿಕ ಭಾಗವಹಿಸುವಿಕೆ' – ಭಾರತದ ನಿಜವಾದ ಶಕ್ತಿ. ಈ ಸಂದರ್ಭದಲ್ಲಿ ನಾವೆಲ್ಲ "ನಮ್ಮ ಜೀವನದಲ್ಲಿ ಸಾಧ್ಯವಾದಲ್ಲೆಲ್ಲಾ ಸ್ವದೇಶದಲ್ಲಿ ತಯಾರಿಸಿದ ವಸ್ತುಗಳಿಗೆ ಆದ್ಯತೆ ನೀಡುತ್ತೇವೆ ಎಂದು ಸಂಕಲ್ಪ ಮಾಡೋಣ  ಎಂದು ಕರೆ ನೀಡಿದ್ದಾರೆ.  ಕಳೆದ ಕೇವಲ ಐದು

ವರ್ಷಗಳಲ್ಲಿ, ಗುಜರಾತ್ನ ಗಿರ್‌ನಲ್ಲಿ ಸಿಂಹಗಳ ಸಂಖ್ಯೆ ೬೭೪ ರಿಂದ ೮೯೧ಕ್ಕೆ ಏರಿಕೆಯಾಗಿದೆ. ಈ ಪ್ರಾಣಿಗಳ ಗಣತಿ ಬಹಳ ಸವಾಲಿನದ್ದಾಗಿದೆ. ಸಿಂಹ ಗಣತಿಯನ್ನು ಹನ್ನೊಂದು ಜಿಲ್ಲೆಗಳಲ್ಲಿ, ೩೫ ಸಾವಿರ ಚದರ ಕಿಲೋಮೀಟರ್ ಪ್ರದೇಶದಲ್ಲಿ ನಡೆಸಲಾಗಿದೆ. 'ಅಂತಾರಾಷ್ಟ್ರೀಯ ಯೋಗ ದಿನ' ಕ್ಕೆ ಒಂದು ತಿಂಗಳಿಗಿಂತ ಕಡಿಮೆ ಸಮಯ ಉಳಿದಿದೆ. ನೀವು ಇನ್ನೂ ಯೋಗಾಭ್ಯಾಸದಿಂದ ದೂರವಿದ್ದರೆ ಕೂಡಲೇ ಯೋಗಾಭ್ಯಾಸ ಆರಂಭಿಸಿ ಎಂಬುದನ್ನು ಈ ಸಂದರ್ಭ ನಮಗೆ ನೆನಪಿಸುತ್ತದೆ ಎಂದು ಯೋಗದ ಮಹತ್ವದ ಬಗ್ಗೆ ತಿಳಿಸಿದ್ದಾರೆ. ಆಂಧ್ರಪ್ರದೇಶ ಸರ್ಕಾರ 'ಯೋಗಆಂಧ್ರ' ಅಭಿಯಾನವನ್ನು ಪ್ರಾರಂಭಿಸಿದೆ. ಇಡೀ ರಾಜ್ಯದಲ್ಲಿ ಯೋಗ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವುದು ಇದರ ಉದ್ದೇಶವಾಗಿದೆ. ಈ ಅಭಿಯಾನದ ಅಡಿಯಲ್ಲಿ, ೧೦ ಲಕ್ಷ ಯೋಗ ಸಾಧಕರ ಗುಂಪನ್ನು ರಚಿಸಲಾಗುತ್ತಿದೆ. ಈ ವರ್ಷ, ವಿಶಾಖಪಟ್ಟಣದಲ್ಲಿ ನಡೆಯುವ 'ಯೋಗ ದಿವಸ್' ಕಾರ್ಯಕ್ರಮದಲ್ಲಿ ಭಾಗವಹಿಸಲು ತಮಗೆ ಅವಕಾಶ ದೊರೆಯಲಿದೆ ತಿಳಿಸಿದರು. ಈ ಬಾರಿಯ ಮನ್ ಕಿ ಬಾತ್ ನಲ್ಲಿ ಪ್ರಧಾನಿ, ಸ್ವಚ್ಛ ಭಾರತ ಅಭಿಯಾನದ ವ್ಯಾಪ್ತಿಯ ಬೆಳವಣಿಗೆ ಕುರಿತಂತೆ ಸಂತಸ ಹಂಚಿಕೊಂಡರು.

ಈ ಕುರಿತು ಒಂದು ವರದಿ -

ಸ್ವಚ್ಛ ಭಾರತ ಅಭಿಯಾನ ಈಗ ಕೇವಲ ನಗರಗಳ ಮಟ್ಟಕ್ಕೆ ಸೀಮಿತವಿಲ್ಲ, ಇದು ಪರ್ವತ ಶಿಖರಗಳವರೆಗೆ ವಿಸ್ತರಿಸಿದೆ. ಈ ಕುರಿತಂತೆ ಇಂದಿನ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ವಿಶೇಷ ಮಾಹಿತಿ ಹಂಚಿಕೊಂಡರು.

ಐಟಿಬಿಪಿ ತಂಡ ವಿಶ್ವದ ಐದನೇ ಎತ್ತರದ ಶಿಖರವಾದ ಮೌಂಟ್ ಮಕಾಲುವನ್ನು ಏರುವಾಗ, ಅಲ್ಲಿ ಬಿದ್ದಿದ್ದ ೧೫೦ ಕಿಲೋಗ್ರಾಮಕ್ಕೂ ಅಧಿಕ ಜೈವಿಕ ವಿಘಟನೀಯವಲ್ಲದ ತ್ಯಾಜ್ಯವನ್ನು ಸಂಗ್ರಹಿಸಿತು. ಇದು ಕಠಿಣ ಪರಿಸ್ಥಿತಿಯಲ್ಲಿಯೇ ಸ್ವಚ್ಛತೆಗೆ ತೋರಿಸಿದ ಬದ್ಧತೆಯ ಪ್ರತೀಕವಾಗಿದೆ.

ಇದರ ಜೊತೆಗೆ ಕಾಗದದ ತ್ಯಾಜ್ಯ ನಿರ್ವಹಣೆ ಬಗ್ಗೆಯೂ ಮಾತನಾಡಿದ ಪ್ರಧಾನಿ, ಇದು ಇಂದಿನ ಮುಖ್ಯ ಸಮಸ್ಯೆಯಾಗಿದೆ ಎಂದು ಬಣ್ಣಿಸಿದರು. ದೇಶದ ತ್ಯಾಜ್ಯ ವಿಲೇವಾರಿ ಸ್ಥಳಗಳಲ್ಲಿ ಬಹುಪಾಲು ಕಾಗದದ ತ್ಯಾಜ್ಯವಿದೆ. ಆದ್ದರಿಂದ ಕಚೇರಿ ಮತ್ತು ಮನೆಯ ಮಟ್ಟದಲ್ಲಿ ಕಾಗದವನ್ನು ಬೇರ್ಪಡಿಸುವ ಅಭ್ಯಾಸವನ್ನು ರೂಪಿಸಬೇಕೆಂದು ಸಮಸ್ತ ನಾಗರಿಕರಿಗೆ ಪ್ರಧಾನಿ ಕರೆ ನೀಡಿದರು. ಒಂದು ಟನ್ ಕಾಗದವನ್ನು ಮರುಬಳಕೆ ಮಾಡುವುದರಿಂದ ೧೭ ಮರಗಳು ಮತ್ತು ಸಾವಿರಾರು ಲೀಟರ್ ನೀರನ್ನು ಉಳಿಸಬಹುದು ಎಂದ ಅವರು, ವಿಶಾಖಪಟ್ಟಣಂ, ಗುರುಗ್ರಾಮ, ಜಾಲ್ನಾ ಮೊದಲಾದ ನಗರಗಳ ನವೋದ್ಯಮಗಳು ಕಾಗದ ಮರುಬಳಕೆಯಲ್ಲಿ ನವೀನ ತಂತ್ರಜ್ಞಾನಗಳನ್ನು ಬಳಸುತ್ತಿದ್ದು, ಪರಿಸರ ಸಂರಕ್ಷಣೆಗೆ ಮುಂದಿದ್ದಾರೆ. ಇತ್ತೀಚೆಗೆ ಖೇಲೋ ಇಂಡಿಯಾ ಕ್ರೀಡಾಕೂಟವು ದೊಡ್ಡ ಯಶಸ್ಸನ್ನು ಕಂಡಿದೆ. ಬಿಹಾರದ ಐದು ನಗರಗಳು ಖೇಲೋ ಇಂಡಿಯಾ ಕ್ರೀಡಾಕೂಟವನ್ನು ಆಯೋಜಿಸಿದ್ದವು. ಈ ಬಾರಿ ಖೇಲೋ ಇಂಡಿಯಾದಲ್ಲಿ ಒಟ್ಟು ೨೬ದಾಖಲೆಗಳು ನಿರ್ಮಾಣವಾಗಿವೆ. ಮಹಾರಾಷ್ಟ್ರದ ಸಾಯಿರಾಜ್ ಪರದೇಸಿ ಮೂರು ದಾಖಲೆಗಳನ್ನು ಬರೆದರು. ಅಥ್ಲೆಟಿಕ್ಸ್ ನಲ್ಲಿ, ಉತ್ತರ ಪ್ರದೇಶದ ಖಾದಿರ್ ಖಾನ್ ಮತ್ತು ಶೇಖ್ ಜೀಶನ್ ಮತ್ತು ರಾಜಸ್ಥಾನದ ಹಂಸರಾಜ್ ಅತ್ಯುತ್ತಮ ಪ್ರದರ್ಶನ ನೀಡಿದರು. ಈ ಬಾರಿ ಬಿಹಾರ ಕೂಡ ೩೬ ಪದಕಗಳನ್ನು ಗೆದ್ದಿದೆ. ಇದು ಸಂತಸ ತಂದಿದೆ ಎಂದು ಹೇಳಿದರು. ಮುಂದಿನ ಬಾರಿ ನೀವು ಜೇನುತುಪ್ಪವನ್ನು ಖರೀದಿಸಿದಾಗ, ಈ ಜೇನುತುಪ್ಪದ ಉದ್ಯಮಿಗಳು ತಯಾರಿಸಿದ ಜೇನುತುಪ್ಪವನ್ನು ಪ್ರಯತ್ನಿಸಿ ನೋಡಿ, ಸ್ಥಳೀಯ ರೈತರು, ಮಹಿಳಾ ಉದ್ಯಮಿಗಳಿಂದ ಜೇನುತುಪ್ಪವನ್ನು ಖರೀದಿಸಲು ಪ್ರಯತ್ನಿಸಿ. ಏಕೆಂದರೆ ಅದರ ಪ್ರತಿ ಹನಿಯೂ ರುಚಿಯನ್ನು ಮಾತ್ರವಲ್ಲದೆ ಭಾರತದ ಕಠಿಣ ಪರಿಶ್ರಮ ಮತ್ತು ಭರವಸೆಯನ್ನು ಸಹ ಹೊಂದಿದೆ. ಈ ಜೇನುತುಪ್ಪದ ಮಾಧುರ್ಯವು ಸ್ವಾವಲಂಬಿ ಭಾರತದ ರುಚಿಯಾಗಿದೆ ಎಂದು ಪ್ರಧಾನಿ ಹೇಳಿದರು.

<><><><>

ಭಾರತ ಈಗ ಜಪಾನ್ ದೇಶದವನ್ನು ಹಿಂದಿಕ್ಕಿ ಜಾಗತಿಕವಾಗಿ ನಾಲ್ಕನೇ ಅತಿ ದೊಡ್ಡ ಆರ್ಥಿಕತೆ ಆಗಿ ಹೊರಹೊಮ್ಮಿದೆ. ಮುಂದಿನ ದಿನಗಳಲ್ಲಿ ಜರ್ಮನಿಯನ್ನೂ ಹಿಂದಿಕ್ಕಿ ಮೂರನೇ ಸ್ಥಾನಕ್ಕೇರುವ ಸಾಧ್ಯತಿಯಿದೆ ಎಂದು ನೀತಿ ಆಯೋಗಐಎಂಎಫ್ ವರದಿ ಪ್ರಕಾರ, ೨೦೨೫ರಲ್ಲಿ ಭಾರತದ ಜಿಡಿಪಿ ೪.೧೯ ಟ್ರಿಲಿಯನ್ ಡಾಲರ್ ಆಗಿದ್ದು, ಜಪಾನ್ ಉಆಃ ೪.೧೮ ಟ್ರಿಲಿಯನ್ ಡಾಲರ್ ಅನ್ನು ಮೀರಿದೆ. ಇದು ಭಾರತ ಮುಂದಿನ ಎರಡು ವರ್ಷಗಳಲ್ಲಿ ಶೇಕಡ ೬ ಕ್ಕಿಂತ ಹೆಚ್ಚಾಗಿ ಬೆಳವಣಿಗೆ ಸಾಧಿಸುವ ಏಕೈಕ ಪ್ರಮುಖ ಆರ್ಥಿಕತೆಯಾಗಿದ್ದು, ೨೦೨೮ರಲ್ಲಿ ೫.೫೮ ಟ್ರಿಲಿಯನ್ ಡಾಲರ್ ಜಿಡಿಪಿ ತಲುಪುವ ನಿರೀಕ್ಷಿಯಿದೆ.

<><><><>

೨೦೨೪-೨೫ನೇ ಹಣಕಾಸು ವರ್ಷಕ್ಕೆ ನೌಕರರ ಭವಿಷ್ಯ ನಿಧಿ-ಇಪಿಎಫ್ ಠೇವಣಿಗಳ ಮೇಲಿನ ಶೇಕಡಾ ೮.೨೫ ಬಡ್ಡಿದರವನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ. ಇದು ಭಾರತದಾದ್ಯಂತ ೭ ಕೋಟಿಗೂ ಹೆಚ್ಚು ಸಂಬಳ ಪಡೆಯುವ ಉದ್ಯೋಗಿಗಳಿಗೆ ಪ್ರಯೋಜನ ನೀಡಲಿದೆ. ಈ ದರವನ್ನು ಪ್ರಸಕ್ತ ವರ್ಷದ ಆರಂಭದಲ್ಲಿ ನೌಕರರ ಭವಿಷ್ಯ ನಿಧಿ ಸಂಸ್ಥೆ, ಕೇಂದ್ರೀಯ ಟ್ರಸ್ಟಿಗಳ ಮಂಡಳಿಯು ಶಿಫಾರಸು ಮಾಡಿತ್ತು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನವದೆಹಲಿಯಲ್ಲಿ ಎನ್‌ಡಿಎ ಸರ್ಕಾರವಿರುವ ರಾಜ್ಯಗಳ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಸಭೆ ಪ್ರಗತಿಯಲ್ಲಿದೆ. ಉತ್ತಮ ಆಡಳಿತದ ಕುರಿತ ದಿನಪೂರ್ತಿ ಚಿಂತನ ಮಂಥನ ಕಾರ್ಯಕ್ರಮ ಇದಾಗಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಗೃಹ ಸಚಿವ ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ಭಾಗವಹಿಸಿದ್ದಾರೆ.

ಎನ್‌ಡಿಎ ಆಡಳಿತವಿರುವ ೨೦ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ೧೮ ಉಪಮುಖ್ಯಮಂತ್ರಿಗಳು ಉತ್ತಮ ಆಡಳಿತದ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಬಿಜೆಪಿ ಉತ್ತಮ ಆಡಳಿತ ವಿಭಾಗ ಈ ಸಭೆಯನ್ನು ಆಯೋಜಿಸಿದ್ದು, ಕಾರ್ಯಕ್ರಮದಲ್ಲಿ ಎರಡು ನಿರ್ಣಯಗಳನ್ನು ಅಂಗೀಕರಿಸಲಾಗುವುದು.

ವಿವಿಧ ರಾಜ್ಯಗಳ ಉತ್ತಮ ಆಡಳಿತ ಮಾದರಿಗಳೂ ಚರ್ಚೆಗೆ ಬರಲಿದ್ದು, ಮುಖ್ಯಮಂತ್ರಿಗಳು ತಮ್ಮ ಸರ್ಕಾರದ ಸಾಧನೆಗಳ ಪ್ರಸ್ತುತಿ ನೀಡಲಿದ್ದಾರೆ. ಸಭೆಯಲ್ಲಿ ಎನ್‌ಡಿಎ ಸರ್ಕಾರದ ಮೊದಲ ವರ್ಷದ ವಾರ್ಷಿಕೋತ್ಸವ, ಅಂತರಾಷ್ಟ್ರೀಯ ಯೋಗ ದಿನದ ದಶಮಾನೋತ್ಸವ ಮತ್ತು ೫೦ನೇ ಲೋಕತಂತ್ರ ಹತ್ಯೆ ದಿನದ ಕುರಿತ ಪೂರ್ವಸಿದ್ಧತೆಗಳನ್ನೂ ಚರ್ಚಿಸಲಾಗುತ್ತದೆ.

<><><><>

ರೋಲ್ಯಾಂಡ್-ಗ್ಯಾರೋಸ್ ಎಂದೂ ಕರೆಯಲ್ಪಡುವ ಪ್ರತಿಷ್ಠಿತ ಫ್ರೆಂಚ್ ಓಪನ್ ಟೆನಿಸ್ ಇಂದು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಆರಂಭವಾಗಲಿದೆ. ಅನುಭವಿ ಟೆನಿಸ್ ಆಟಗಾರ ರೋಹನ್ ಬೋಪಣ್ಣ, ಯೂಕಿ ಭಾಂಬ್ರಿ, ಎನ್. ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ ಅವರೊಂದಿಗೆ ಪುರುಷರ ಡಬಲ್ಸ್ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

<><><><>

ಅಮೆರಿಕಗೆ ತೆರಳಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ಸರ್ವಪಕ್ಷ ನಿಯೋಗ ಪಹಲ್ಗಾಂ ಭಯೋತ್ಪಾದಕ ದಾಳಿಯ ಬಳಿಕ ಪಾಕಿಸ್ತಾನದಲ್ಲಿನ ಭಯೋತ್ಪಾದಕ ಕೇಂದ್ರಗಳ ಮೇಲೆ ಭಾರತ ನಿಖರ ಮತ್ತು ನಿಯಂತ್ರಿತ ರೀತಿಯಲ್ಲಿ ಪ್ರತಿಕ್ರಿಯಿಸಿದ್ದನ್ನು ಉಲ್ಲೇಖಿಸಿದೆ. ನಿಯೋಗ ೯/೧೧

ಸ್ಮಾರಕಕ್ಕೂ ಭೇಟಿ ನೀಡಿ, ಭಯೋತ್ಪಾದನೆಯ ವಿರುದ್ಧ ಜಾಗತಿಕ ಏಕತಾ ಅಗತ್ಯವೆಂದು ಕರೆ ನೀಡಿದೆ. ನಂತರ ಅವರು ಗಯಾನಾ, ಪನಾಮಾ, ಬ್ರೆಜಿಲ್ ಮತ್ತು ಕೊಲಂಬಿಯಾ ಪ್ರವಾಸ ಕೈಗೊಳ್ಳಲಿದ್ದಾರೆ.

<><><><>

ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಎರಡು ಪಂದ್ಯಗಳು ನಡೆಯಲಿದ್ದು, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ದಿನದ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಅಪರಾಹ್ನ ೩.೩೦ ಕ್ಕೆ ಪ್ರಾರಂಭವಾಗಲಿದೆ.

ದೆಹಲಿಯಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಸೆಣಸಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><><><>